# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1356**
ಸದಸ್ಯರ ಹೆಸರು : ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 16-03-2026
ಉತ್ತರಿಸುವ ಸಚಿವರು ಮಾನ್ಯ ಇಂಧನ ಸಚಿವರು

****

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಸದಿಂದ ವಿದ್ಯುತ್ ಉತ್ಪಾದಿಸುವ ಕಾರ್ಯದಲ್ಲಿ ಆಗಿರುವ ಪ್ರಗತಿ ಏನು: (ವಿವರ ನೀಡುವುದು) | ಬೆಸ್ಕಾಂ ಸಂಸ್ಥೆಯಲ್ಲಿ ಕಸದಿಂದ ವಿದ್ಯುತ್ ಉತ್ಪಾದಿಸುವ ಯೋಜನೆಗಳಿಗೆ ಸಂಬಂಧಿಸಿದಂತೆ 03 ವಿದ್ಯುತ್ ಖರೀದಿ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದ್ದು, ಇದರಲ್ಲಿ 01 ಸಂಖ್ಯೆಯ 11.5ಮೆಗಾವ್ಯಾಟ್ ಸಾಮರ್ಥ್ಯದ ಘಟಕಕ್ಕೆ ಕೆಪಿಸಿಎಲ್‌ನ ಗ್ಯಾಸ್ ಪವರ್ ಕಾರ್ಪೋರೇಷನ್ ಲಿಮಿಟೆಡ್ ನೊಂದಿಗೆ ಮತ್ತು ಉಳಿದ 02 ಸಂಖ್ಯೆಯ 26ಮೆಗಾವ್ಯಾಟ್ ಸಾಮರ್ಥ್ಯದ ಘಟಕಗಳಿಗೆ ಖಾಸಗಿ ಅಭಿವೃದ್ಧಿದಾರರೊಂದಿಗೆ ವಿದ್ಯುತ್ ಖರೀದಿ ಒಪ್ಪಂದ ಮಾಡಿಕೊಳ್ಳಲಾಗಿದೆ. ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ.<br><br>ಇದರಲ್ಲಿ ಕೆಪಿಸಿಎಲ್ ಗ್ಯಾಸ್ ಪವರ್ ಕಾರ್ಪೋರೇಷನ್ ಲಿಮಿಟೆಡ್‌ನ ರಾಮನಗರ ಜಿಲ್ಲೆಯ ಬಿಡದಿಯಲ್ಲಿ 11.5 MW ಸಾಮರ್ಥ್ಯದ ತ್ಯಾಜ್ಯದಿಂದ ಇಂಧನ ಸ್ಥಾವರವನ್ನು ಒಟ್ಟು ರೂ.310 ಕೋಟಿ ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗಿದೆ. ಈ ಘಟಕವು ಪ್ರತಿದಿನ 600 ಟನ್ ಘನ ತ್ಯಾಜ್ಯ/ಆರ್‌ಡಿಎಫ್ (Refuse Derived Fuel) ಅನ್ನು ಬಳಸುತ್ತದೆ. ಘಟಕವು ದಿನಾಂಕ 23.09.2024 ರಂದು ಪೂರ್ಣ ಸಾಮರ್ಥ್ಯವನ್ನು ಸಾಧಿಸಿತು. ವಾಣಿಜ್ಯ ಕಾರ್ಯಾಚರಣೆ ಘೋಷಣೆಯು (COD) ದಿನಾಂಕ 19.12.2024 ರಂದು ಪೂರ್ಣಗೊಂಡಿದೆ.<br><br>ಉಳಿದ 02 ಘಟಕಗಳನ್ನು ಖಾಸಗಿ ಅಭಿವೃದ್ಧಿದಾರರು ತಮ್ಮ ಸ್ವಂತ ಬಂಡವಾಳ ವೆಚ್ಚದಲ್ಲಿ ಅನುಷ್ಠಾನಗೊಳಿಸುತ್ತಿದ್ದಾರೆ. |
| ಆ) | ಈ ಉದ್ದೇಶಕ್ಕಾಗಿ ಎಷ್ಟು ಘಟಕಗಳನ್ನು ನಿರ್ಮಿಸಲಾಗಿದೆ; ಪ್ರತಿ ಘಟಕ ನಿರ್ಮಾಣಕ್ಕೆ ಆಗಿರುವ ವೆಚ್ಚ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | |
| ಇ) | ಪ್ರತಿ ಘಟಕದಿಂದ ಎಷ್ಟು ವಿದ್ಯುತ್ ಉತ್ಪಾದನೆ ಮಾಡಲು ಉದ್ದೇಶಿಸಲಾಗಿದೆ: ಈಗ ಆರಂಭಗೊಂಡಿರುವ ಘಟಕಗಳಿಂದ ಎಷ್ಟು ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಆಗುತ್ತಿದೆ; | ಕೆಪಿಸಿಎಲ್ ಗ್ಯಾಸ್ ಪವರ್ ಕಾರ್ಪೋರೇಷನ್ ಲಿಮಿಟೆಡ್‌ನ ರಾಮನಗರ ಜಿಲ್ಲೆಯ ಬಿಡದಿಯ 11.5 MW ಸಾಮರ್ಥ್ಯದ ಘಟಕದಿಂದ ವಾರ್ಷಿಕವಾಗಿ 70 ಮಿಲಿಯನ್ ಯೂನಿಟ್ ವಿದ್ಯುತ್ ಉತ್ಪಾದಿಸಲು @ 80% PLF ಉದ್ದೇಶಿಸಲಾಗಿದೆ. ಪ್ರಸ್ತುತ 2025-26 ನೇ ಸಾಲಿನಲ್ಲಿ (01.04.2025 ರಿಂದ 05.03.2026 ರವರೆಗೆ) ಒಟ್ಟು 59.45 ಮಿಲಿಯನ್ ಯೂನಿಟ್ ವಿದ್ಯುತ್ ಉತ್ಪಾದನೆ ಮಾಡಲಾಗಿದೆ. |
| ಈ) | ರಾಜ್ಯಾದ್ಯಂತ ತಾಲ್ಲೂಕಿಗೆ ಒಂದು ವಿದ್ಯುತ್ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; ಇದಕ್ಕೆ ಅಗತ್ಯ ಇರುವ ಹಣ ಎಷ್ಟು? | ಪ್ರಸ್ತುತ ಸದರಿ ಪ್ರಸ್ತಾವನೆ ಇಂಧನ ಇಲಾಖೆಯ ಮುಂದಿರುವುದಿಲ್ಲ. |

ಸಂಖ್ಯೆ: ಎನರ್ಜಿ 71 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಸಚಿವರು

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಸಿ.ಟಿ.ರವಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1356 ಗೆ ಅನುಬಂಧ**

ಬೆಸ್ಕಾಂ ಸಂಸ್ಥೆಯಲ್ಲಿ ಕಸದಿಂದ ವಿದ್ಯುತ್ ಉತ್ಪಾದಿಸುವ ಯೋಜನೆಗಳಿಗೆ ಸಂಬಂಧಿಸಿದಂತೆ ಮಾಡಿಕೊಂಡಿರುವ ವಿದ್ಯುತ್ ಖರೀದಿ ಒಪ್ಪಂದಗಳ ವಿವರ:

| ಕ್ರ ಸಂ | ವಿವರ | ಸಾಮರ್ಥ್ಯ ಮೆ.ವ್ಯಾ. ನಲ್ಲಿ | ಜಕಾತಿ ದರ ರೂ. ಪ್ರತಿ ಯೂನಿಟ್‌ಗೆ | ಒಡಂಬಡಿಕೆಯ ದಿನಾಂಕ |
|---|---|---|---|---|
| 1 | ಮೆ॥ ಸತಾರಂ ಆಲ್ಟರ್‌ನೇಟಿವ್ ಫ್ಯುಯಲ್ & ಎನರ್ಜಿ ಪ್ರೈವೇಟ್ ಲಿಮಿಟೆಡ್- ಕನ್ನಹಳ್ಳಿ ವಿಲೇಜ್, ಯಶವಂತಪುರ ಹೋಬಳಿ, ಬೆಂಗಳೂರು (ಉತ್ತರ). | 14.5 | 7.08 | 03.03.2021 (Tripartite PPA) |
| 2 | ಮೆ॥ MSGP ಇನ್ಫ್ರಾಟೆಕ್ ಪ್ರೈವೇಟ್ ಲಿಮಿಟೆಡ್. – ಚಿಗುರನಹಳ್ಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ, ಕರ್ನಾಟಕ. | 11.5 | 7.08 | 20.03.2023 (Tripartite PPA) |
| 3 | ಗ್ಯಾಸ್ ಪವರ್ ಕಾರ್ಪೋರೇಷನ್ ಲಿಮಿಟೆಡ್- ಕೆಪಿಸಿಎಲ್ ಬಿಡದಿ ಸೈಟ್, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ, ಕರ್ನಾಟಕ. | 11.5 | 7.08 | 25.10.2024 |